# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–3590/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 17/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀಮತಿ ಸಾವಿತ್ರಿ ಭಟ್ ಕೋಂ ಲೇಟ್ ಗುರುರಾಜ ಭಟ್, ಮಣ್ಣೋಳ್ಳಿಗುಜ್ಜಿ, ಕುಂಜಿಬೆಟ್ಟು, ಉಡುಪಿ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀಮತಿ ಸಾವಿತ್ರಿ ಭಟ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿಯ ಸರ್ವೇ ನಂ.85/33 ರಲ್ಲಿ ಇರುವ ಡೋರ್ ನಂಬರ್ 8–3–50, 8–3–50ಎ ಮತ್ತು 8–3–50ಬಿ ಯ ಮನೆಗಳು ದೂರುದಾರರ ಹೆಸರಿನಲ್ಲಿದ್ದರೂ ಎದುರುದಾರರುಗಳು ದೂರುದಾರರ ಮಗ ಶ್ರೀ ಕೇಶವ ಭಟ್ ಹಾಗೂ ಅವರ ಪತ್ನಿ ಶ್ರೀಮತಿ ವಿದ್ಯಾರವರೊಡನೆ ಶಾಮೀಲಾಗಿ ದೂರುದಾರರಿಗೆ ನಾನಾ ರೀತಿಯ ಕಿರುಕುಳ ಕೊಟ್ಟು, ಸದರಿ ಮನೆಯಿಂದ ಹೊರದೂಡಿರುತ್ತಾರೆ. ತಾನು ಈಗ ದೇವಸ್ಥಾನದ ಕಟ್ಟೆಯಲ್ಲಿ ಆಶ್ರಯ ಪಡೆದಿರುತ್ತೇನೆಂದು, ಇದಲ್ಲದೇ, ಎದುರುದಾರರುಗಳಿಗೆ ತಾನು ಕೊಟ್ಟ ದೂರನ್ನು ಎದುರುದಾರರುಗಳು ನೋಂದಾಯಿಸಿಕೊಳ್ಳದೇ ಸತಾಯಿಸುತ್ತಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಎದುರುದಾರರುಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಾದ ಶ್ರೀಮತಿ ಸಾವಿತ್ರಿ ಭಟ್‌ರವರು ಮನೆ ನಂ. 8–3–50 "ಸಾವಿತ್ರಿ ನಿಲಯ" ಶ್ರೀ ಗಣೇಶ್ ಮುನೋಳಿ ಗುಜ್ಜಿ, ಕುಂಜಿಬೆಟ್ಟು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ತನ್ನ ಮಗ ಶ್ರೀ ಕೇಶವ ಭಟ್ಟ ಮತ್ತು ಅವರ ಪತ್ನಿ ಸೇರಿ ತನ್ನನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂಬ ವಿಚಾರದಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರು ಆದೇಶ ಮಾಡಿದ್ದು, ಸದರಿ ಆದೇಶದಲ್ಲಿ ಪೊಲೀಸ್‌ನವರು

ಸದರಿ ಮನೆಯ ಸುರ್ಪದನ್ನು ಶ್ರೀಮತಿ ಸಾವಿತ್ರಿ ಭಟ್ ರವರಿಗೆ ಕೊಡಿಸಿಕೊಡಲು ಸಹಕರಿಸಬೇಕೆಂದು ಆದೇಶಿಸಿದ್ದು, ಅದರಂತೆ, ದೂರುದಾರರ ಮಗನಾದ ಶ್ರೀ ಕೇಶವ ಭಟ್ಟ ಇವರ ಮನೆಯ ನಂಬರ್ 8–3–50 ಅನ್ನು ಸೂಕ್ತ ಭದ್ರತೆಯೊಂದಿಗೆ ದೂರುದಾರರಿಗೆ ಬಿಡಿಸಿಕೊಡಲಾಗಿರುತ್ತದೆ. ಸದರಿ ಶ್ರೀ ಕೇಶವ ಭಟ್ ಇವರು ದೂರುದಾರರು ಬಿಡಿಸಿಕೊಟ್ಟ ಮನೆಯ ಮೇಲಿನ ಮಾಳಿಗೆ ನಂಬರ್ 8–3–50ಎ ರಲ್ಲಿ ವಾಸವಿರುತ್ತಾರೆ. ಆದರೆ, ದೂರುದಾರರು ಸದರಿ 8–3–50ಎ ಅನ್ನು ಖಾಲಿ ಮಾಡಿಸಿಕೊಡಬೇಕೆಂದು ಪೊಲೀಸ್ ಇಲಾಖೆಗೆ ಮತ್ತು ಮೇಲಧಿಕಾರಿಗಳಿಗೆ ಮೇಲಿಂದ ಮೇಲೆ ಅರ್ಜಿ ಸಲ್ಲಿಸುತ್ತಿದ್ದು, ಈ ಬಗ್ಗೆ ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಲಾಗಿರುತ್ತದೆ. ಸದರಿ ದೂರುದಾರರಿಗೆ ನ್ಯಾಯಾಲಯದ ಆದೇಶವಿಲ್ಲದೆ 8–3–50ಎ ಮನೆಯನ್ನು ಖಾಲಿ ಮಾಡಿಸಿಕೊಡಲು ಸಾಧ್ಯವಿಲ್ಲವೆಂದು ಮತ್ತು ಸದರಿ ಆಸ್ತಿಗೆ ಸಂಬಂಧಿಸಿದ ವಿಚಾರವು ಸಿವಿಲ್ ಸ್ವರೂಪದ ಪ್ರಕರಣವೆಂದು ತಿಳಿಸಲಾಗಿರುತ್ತದೆ ಹಾಗೂ ಅವರಿಗೆ ಸೂಕ್ತ ಹಿಂಬರಹವನ್ನು ನೀಡಲಾಗಿರುತ್ತದೆ. ಈ ಹಿಂದೆ ವಿಚಾರಣೆ ನಡೆಸಿ ಪ್ರಕರಣ ಸಂಖ್ಯೆ: ಎಂಎಜಿ/ಎಸ್‌ಆರ್/155/2013–14ರ ಪ್ರಕರಣದಲ್ಲಿ ಮಾನ್ಯ ಅಸಿಸ್ಟೆಂಟ್ ಕಮೀಷನರ್‌ರವರು ದಿ:26/06/2014 ರಂದು ಆದೇಶ ಹೊರಡಿಸಿ ಮನೆ ನಂಬರ್ 8–3–50 ಅನ್ನು ಖಾಲಿ ಮಾಡಿಸಿಕೊಡಲು ಆದೇಶಿಸಿರುತ್ತಾರೆ. ಇದರಲ್ಲಿ 8–3–50ಎರ ಮನೆಯನ್ನು ಖಾಲಿ ಮಾಡಿಸುವ ಬಗ್ಗೆ ಆದೇಶವಿರುವುದಿಲ್ಲ. ಆದ್ದರಿಂದ, ದೂರುದಾರರಿಗೆ ಈ ಬಗ್ಗೆ ತಿಳುವಳಿಕೆ ನೀಡಲಾಗಿದ್ದರೂ ಸಹ, ದೂರುದಾರರು ತಮ್ಮ ಮೇಲೆ ಪ್ರಸಕ್ತ ಪ್ರಕರಣದ ದೂರನ್ನು ನೀಡಿರುತ್ತಾರೆ. ತಮ್ಮಿಂದ ಯಾವುದೇ ಕರ್ತವ್ಯಲೋಪವಾಗಿಲ್ಲವೆಂದು, ಆದ್ದರಿಂದ ತಮ್ಮ ಮೇಲಿನ ಪ್ರಕರಣವನ್ನು ಕೈಬಿಡಬೇಕೆಂದುಕೋರಿರುತ್ತಾರೆ.

3. 2ನೇ ಎದುರುದಾರರು ಸಹ 1ನೇ ಎದುರುದಾರರು ನೀಡಿರುವ ಆಕ್ಷೇಪಣೆ ವಿವರಗಳನ್ನು ನಮೂದಿಸಿ, ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

4. ಸದರಿ ಎದರುದಾರರುಗಳ ಆಕ್ಷೇಪಣೆಯ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಈ ಹಿಂದೆ ಸರ್ವೇ ನಂ.85/33ರ ಸಂಪೂರ್ಣ ಆಸ್ತಿಯನ್ನು ತನ್ನ 8 ಮಕ್ಕಳಿಗೂ ಈಗಾಗಲೇ ಸಮಪಾಲು ಮಾಡಿ ಕೊಟ್ಟಿರುವುದಾಗಿಯೂ, ಮನೆ ನಂಬರ್ 8–3–50, 8–3–50ಎ ಮತ್ತು 8–3–50ಬಿ ಮನೆಗಳು ತನ್ನದೇ ಆಗಿದ್ದು, ತನ್ನ ಮಗ ಶ್ರೀ ಕೇಶವ ಭಟ್ ತನ್ನಿಂದ ಸುಳ್ಳು ಮಾಹಿತಿ ನೀಡಿ, ಸದರಿ ಮನೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿದ್ದು, ಈ ಬಗ್ಗೆ ತಾನು ಹಿರಿಯ ನಾಗರೀಕರಿಗೆ ಸರ್ಕಾರವು ರಕ್ಷಣೆ ಮಾಡಿಸುವ ನಿಟ್ಟಿನಲ್ಲಿ ಹೊರಡಿಸಲಾಗಿರುವ "ಪೋಷಕರ ಮತ್ತು ಹಿರಿಯ ನಾಗರೀಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ 2007" ರಂತೆ ತನಗೆ ತನ್ನ ಮೇಲೆ ಹೇಳಿದ ಮನೆಯ ಬಗ್ಗೆ ಸೂಕ್ತ ಆದೇಶ ಹೊರಡಿಸಿ ಮನೆಯನ್ನು ತನ್ನ ಸುಪರ್ದಿಗೆ ಕೊಡಿಸಬೇಕೆಂದು

ಕೋರಿ ಅರ್ಜಿ ಸಲ್ಲಿಸಿದ್ದು, ಮೇಲೆ ಹೇಳಿದ ಕಾಯ್ದೆಯಡಿಯಲ್ಲಿ ವಿರಚಿತವಾಗಿರುವ ಪ್ರಾಧಿಕಾರವಾದ ಸಹಾಯಕ ಆಯುಕ್ತರು ಇವರು ದಿ:26/06/2014 ರಂದು ಸದರಿ ದೂರುದಾರರ ಅರ್ಜಿಯ ಮೇಲೆ ವಿಚಾರಣೆ ನಡೆಸಿ ಆದೇಶವನ್ನು ಹೊರಡಿಸಿರುತ್ತಾರೆ. ಸದರಿ ಉಪವಿಭಾಗಾಧಿಕಾರಿಯವರು ತಮ್ಮ ಆದೇಶದಲ್ಲಿ ದೂರುದಾರರ ಮಗ 1ನೇ ಪ್ರತಿವಾದಿ ಶ್ರೀ ಕೇಶವ ಭಟ್, 2ನೇ ಪ್ರತಿವಾದಿ ಶ್ರೀಮತಿ ವಿದ್ಯಾರವರು ತನಗೆ ಜನ್ಮ ನೀಡಿದ ಅರ್ಜಿದಾರರಾದ ಶ್ರೀಮತಿ ಸಾವಿತ್ರಿಯವರು ಕುಟುಂಬದ ಸಲುವಾಗಿ ರೂ.3.00 ಲಕ್ಷ ಸಾಲ ಮಾಡಿ ಅಡಮಾನ ಮಾಡಿದ ಮನೆಯನ್ನು ಮಗನಾದ ತಾನು ಸಾಲ ತೀರಿಸಿ ಅದಕ್ಕೆ ಪ್ರತಿಪಲವಾಗಿ ಸುಮಾರು 50.00 ಲಕ್ಷ ಬೆಲೆ ಬಾಳುವ ಮನೆಯನ್ನು ತನ್ನ ಹೆಸರಿಗೆ ಬರೆಸಿಕೊಂಡಿರುವುದು, ತನ್ನ ಸ್ವಂತ ತಾಯಿಯ ಸಂಬಂಧವನ್ನು ಲಾಭ ನಷ್ಟದ ದೃಷ್ಟಿಯಿಂದ ನೋಡಿರುವುದು ಕಂಡು ಬಂದಿರುತ್ತದೆ. ಜೊತೆಗೆ ವಯಸ್ಸಾದ ತನ್ನ ತಾಯಿಯನ್ನು ವೈದ್ಯಕೀಯ ವೆಚ್ಚ ಮಾಡುವುದು ಆರೋಗ್ಯ ಸೌಲಭ್ಯವನ್ನು ಒದಗಿಸುವುದು ಪ್ರತಿಯೊಬ್ಬ ಮಗನ ಕರ್ತವ್ಯವಾಗಿರುತ್ತದೆ. ಅದನ್ನು ಇಷ್ಟು ಖರ್ಚು ಮಾಡಿರುವುದಾಗಿ ಪದೇ ಪದೇ ಹೇಳಿರುವುದು ಅವರ ವ್ಯಾಪಾರಿ ಮನೋಭಾವಕ್ಕೆ ಸ್ಪಷ್ಟನೆ ನೀಡಿರುತ್ತದೆ. 2ನೇ ಪ್ರತಿವಾದಿ ಶ್ರೀಮತಿ ವಿದ್ಯಾರವರು ತನ್ನ ಅತ್ತೆಯ ಮನಸ್ಥಿತಿಯನ್ನು ಅರಿತು ಸ್ವಂತ ತಾಯಿಯಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ, ಅವರು ತನ್ನ ಅತ್ತೆಯ ವಿಶ್ವಾಸಗಳಿಸುವುದನ್ನು ಬಿಟ್ಟು ಅವರ ಮೇಲೆ ದೂರು ಮಾಡುತ್ತಿರುವುದನ್ನು ಗಮನಿಸಲಾಗಿದೆ ಎಂದು ಹೇಳಿ ಉಡುಪಿಯಲ್ಲಿನ ಮನೆ ನಂ.8–3–50ರ ವಾಸದ ಮನೆಯನ್ನು 15 ದಿನದಲ್ಲಿ ಖಾಲಿ ಮಾಡಿ ಸಂತ್ರಸ್ಥೆಯಾದ ಶ್ರೀಮತಿ ಸಾವಿತ್ರಿ ಭಟ್ ಇವರಿಗೆ ಬಿಟ್ಟುಕೊಡಲು ಆದೇಶಿಸಿರುತ್ತಾರೆ. ಮುಂದುವರೆದು, 15 ದಿನದಲ್ಲಿ ಮನೆಯನ್ನು ಬಿಟ್ಟುಕೊಡದಿದ್ದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರು ನಗರ ಠಾಣೆ, ಉಡುಪಿ ಇವರು ಸಂತ್ರಸ್ಥೆ ಶ್ರೀಮತಿ ಸಾವಿತ್ರಿ ಭಟ್ ಇವರನ್ನು ಮನೆಯಲ್ಲಿ ವಾಸಿಸಲು ಅನುವು ಮಾಡಿಕೊಡುವಂತೆ ನಿರ್ದೇಶಿಸಿರುತ್ತಾರೆ. ಸದರಿ ಉಪವಿಭಾಗಾಧಿಕಾರಿಯವರ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ.

5. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು, ದೂರುದಾರರ ಪ್ರತ್ಯುತ್ತರವನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಉಡುಪಿಯ ಕಟ್ಟೆ ಆಚಾರ್ಯ ಮಾರ್ಗದ ಮನೆ ನಂ.8–3–50, 8–3–50ಎ, 8–3–50ಬಿ ಮನೆಗಳಿಗೆ ಶ್ರೀಮತಿ ಸಾವಿತ್ರಿ ಭಟ್‌ರವರು ಮಾಲೀಕರಾಗಿದ್ದು, ಕುಟುಂಬದ ನಿರ್ವಹಣೆಗಾಗಿ ಸದರಿಯವರು ರೂ.3.00 ಲಕ್ಷ ಸಾಲ ಮಾಡಿಕೊಂಡಿದ್ದು, ಅದನ್ನು ದೂರುದಾರರಾದ ಶ್ರೀಮತಿ ಸಾವಿತ್ರಿ ಭಟ್ ರವರ ಮಗ ಶ್ರೀ ಕೇಶವ ಭಟ್ ರವರು ಸಾಲ ತೀರಿಸಿ ರೂ.50.00 ಲಕ್ಷ ಬೆಲೆ ಬಾಳುವ ಸದರಿ ಮನೆಯನ್ನು ತನ್ನ ಹೆಸರಿಗೆ

ಮಾಡಿಕೊಂಡಿರುವುದು ಸ್ಪಷ್ಟ ಪಡುತ್ತದೆ. ಇದಲ್ಲದೇ ಸದರಿ ಮನೆಯನ್ನು ತನ್ನ ಹೆಸರಿಗೆ ಮಾಡಿಕೊಂಡ ನಂತರ ಶ್ರೀಮತಿ ಸಾವಿತ್ರಿ ಭಟ್ ರವರನ್ನು ಅವರ ಮಗ ಶ್ರೀ ಕೇಶವ ಭಟ್ ಮತ್ತು ಆತನ ಪತ್ನಿ ಶ್ರೀಮತಿ ವಿದ್ಯಾರವರು ಕಿರುಕುಳ ನೀಡಿ ಶ್ರೀಮತಿ ಸಾವಿತ್ರಿ ಭಟ್ ರವರನ್ನು ಮನೆಯಿಂದ ಹೊರಹಾಕಿದ್ದು, ಶ್ರೀಮತಿ ಸಾವಿತ್ರಿ ಭಟ್ ರವರು ಉಡುಪಿ ಕೃಷ್ಣ ಮಠದ ಕಟ್ಟೆಯ ಮೇಲೆ ಆಶ್ರಯ ಪಡೆದಿದ್ದ ವಿಷಯ, ಉಪವಿಭಾಗಾಧಿಕಾರಿಗಳು, ಕುಂದಾಪುರ ರವರ ಆದೇಶದಿಂದ ಕಂಡು ಬರುತ್ತದೆ ಮತ್ತು ಸದರಿ ಆದೇಶವನ್ನು ಪರಿಶೀಲಿಸಿದಲ್ಲಿ ಮಾನ್ಯ ಉಪವಿಭಾಗಾಧಿಕಾರಿಗಳು ಶ್ರೀಮತಿ ಸಾವಿತ್ರಿ ಭಟ್‌ರವರನ್ನು ಅವರ ಇಳಿವಯಸ್ಸಿನಲ್ಲಿ ಮನೆಯಿಂದ ಹೊರಗೆ ಹಾಕಿರುವುದು ಮತ್ತು ಅವರಿಗೆ ಕಿರುಕುಳ ನೀಡಿರುವ ಬಗ್ಗೆ ಸದರಿ ಆದೇಶದ ಪ್ರತಿಯಿಂದ ಕಂಡು ಬರುತ್ತದೆ. ಇದಲ್ಲದೇ, ಮಾನ್ಯ ಉಪವಿಭಾಗಾಧಿಕಾರಿಗಳು ಸದರಿ ಮನೆ ಸಂಖ್ಯೆ:8–3–50 ಅನ್ನು ಶ್ರೀಮತಿ ಸಾವಿತ್ರಿ ಭಟ್‌ರವರಿಗೆ ಬಿಟ್ಟುಕೊಡುವುದು ಆದೇಶಿಸಿರುವುದು ಸಹ ಕಂಡು ಬಂದಿರುತ್ತದೆ. ಸದರಿ ಆದೇಶದಂತೆ ಪೊಲೀಸ್ ಇಲಾಖೆಯವರು ಶ್ರೀಮತಿ ಸಾವಿತ್ರಿ ಭಟ್ ರವರಿಗೆ ಸೂಕ್ತ ಭದ್ರತೆ ಒದಗಿಸಿ ಸದರಿ 8–3–50ರ ಮನೆಯನ್ನು ಬಿಡಿಸಿಕೊಟ್ಟಿರುವುದು ಹಾಗೂ ಅದೇ ಮನೆಯ ಮೇಲೆ ಇರುವ 8–3–50ಎ ಮನೆಯಲ್ಲಿ ಸದರಿ ಶ್ರೀ ಕೇಶವ ಭಟ್ ರವರು ಮತ್ತು ಅವರ ಪತ್ನಿ ಶ್ರೀಮತಿ ವಿದ್ಯಾರವರು ವಾಸವಾಗಿರುವುದು ಕಂಡು ಬರುತ್ತದೆ. ಮಾನ್ಯ ಉಪವಿಭಾಗಾಧಿಕಾರಿಯವರ ಆದೇಶದಲ್ಲಿ ತಿಳಿಸಿರುವಂತೆ ಪೋಷಕರ ಮತ್ತು ಹಿರಿಯ ನಾಗರೀಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ 2007ರ ಕಲಂ 23 ರಲ್ಲಿ ತಿಳಿಸಿರುವಂತೆ "Transfer of property in certain circumstances (1) where any senior citizen who after the commencement of this Act has transferred by way of gift or otherwise, his property, subject to the condition that the transferee shall provide the basic amenities and basic physical needs to the transferor and such transferee refuses or fails to provide such amenities and physical needs, the transfer of property shall be deemed to have been made by fraud or coercion or under undue influence and shall at the option of the transferor be declared void by the Tribunal" ಎಂದು ಇರುವುದು ಸ್ಪಷ್ಟ ಪಡುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಉಪವಿಭಾಗಾಧಿಕಾರಿಗಳು ದೂರುದಾರರಿಂದ ರೂ.50.00 ಲಕ್ಷದ ಮನೆಯನ್ನು ತನ್ನ ಹೆಸರಿಗೆ ಬರೆಸಿಕೊಂಡಿರುವುದು ಸೂಕ್ತವಲ್ಲವೆಂದು ತಿಳಿಸಿರುವುದು ಸ್ಪಷ್ಟ ಪಡುತ್ತದೆ. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಶ್ರೀಮತಿ ವಿದ್ಯಾ ಹಾಗೂ ಅವರ ಪತಿ ಶ್ರೀ ಕೇಶವ ಭಟ್ ಇವರು ಸದರಿ ದೂರುದಾರರ ಮನೆಯನ್ನು ಬಿಟ್ಟುಕೊಡದೇ ಸತಾಯಿಸುತ್ತಿರುವುದು ಕಂಡು ಬರುತ್ತದೆ. ಆದ್ದರಿಂದ, ಈ ಹಿನ್ನೆಲೆಯಲ್ಲಿ ಪೋಷಕರ ಮತ್ತು ಹಿರಿಯ ನಾಗರೀಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ ಅಡಿಯಲ್ಲಿ ದೂರುದಾರರ ಮಗ ಶ್ರೀ ಕೇಶವ ಭಟ್ ಮತ್ತು ಆತನ ಪತ್ನಿ

ದೂರುದಾರರನ್ನು ಸರಿಯಾಗಿ ನೋಡಿಕೊಳ್ಳದೇ ತೊಂದರೆ ನೀಡುತ್ತಿರುವಾಗ, ಸದರಿ ದೂರುದಾರರು ತನ್ನ ಮನೆಯನ್ನು ತನಗೆ ಬಿಡಿಸಿಕೊಡಬೇಕೆಂದು ಕೋರಿರುವುದು ನ್ಯಾಯಯುತವೆಂದು ಕಂಡು ಬರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರಾದ ಶ್ರೀಮತಿ ಸಾವಿತ್ರಿ ಭಟ್ ಕೋಂ ದಿ. ಗುರುರಾಜ ಭಟ್, 'ಸಾವಿತ್ರಿ ನಿಲಯ', ಮನೆ ನಂ. 8–3–50ಎ, 8–3–50ಬಿ ಕಟ್ಟೆ ಆಚಾರ್ಯ ಮಾರ್ಗ, ಕಡಿಯಾಳಿ, ಉಡುಪಿ, ಉಡುಪಿ ಜಿಲ್ಲೆ ರವರ ಮನೆಯನ್ನು ದೂರುದಾರರಿಗೆ ಬಿಡಿಸಿಕೊಡಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 28/2/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 1/3/2017